ಕರ್ನಾಟಕ ವಿಧಾನ ಪರಿಷತ್ತು

U/S
27/01/2022

1. ಸದಸ್ಯರ ಹೆಸರು : ಶ್ರೀ ಮಹಾಂತೇಶ ಮ. ಕವಟಗಿಮಠ
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1505
3. ಉತ್ತರಿಸಬೇಕಾದ ದಿನಾಂಕ : 24-09-2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ನರೇಗಾ ಯೋಜನೆಯ ಲೋಪದೋಷಗಳ ಕುರಿತು ಪರಾಮರ್ಶೆ ನಡೆಸುವ ಉದ್ದೇಶದಿಂದ ಕೇಂದ್ರದ ಮಾರ್ಗಸೂಚಿ ಪ್ರಕಾರ ತಿಂಗಳಿಗೊಮ್ಮೆ ನಡೆಸಲು ಉದ್ದೇಶಿಸಿರುವ "ರೋಜ್‌ಗಾರ್ ದಿವಸ್" ಯೋಜನೆಯು ಸಮರ್ಪಕವಾಗಿ ಕಾರ್ಯಗತಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಗ್ರಾಮೀಣ ಪ್ರದೇಶದಲ್ಲಿ ನೋಂದಾಯಿತ ಕುಟುಂಬಗಳಿಗೆ ಯೋಜನೆಯಡಿ ಕೂಲಿಕಾರರಿಗೆ ಕಲ್ಪಿಸಿರುವ ಹಕ್ಕು ಬಾಧ್ಯತೆಗಳು ಅರ್ಹತೆಗಳ ಬಗ್ಗೆ ತಿಳಿಸಿ ಕೂಲಿ ಬೇಡಿಕೆಯನ್ನು ನಿಖರವಾಗಿ ಪಡೆಯುವ ಸಾಧನವಾಗಿ ಗ್ರಾಮಪಂಚಾಯತಿ ಮಟ್ಟದಲ್ಲಿ ತಿಂಗಳಿಗೊಮ್ಮೆ (ಎರಡನೇ ಗುರುವಾರ) ರೋಜ್‌ಗಾರ್ ದಿವಸ್ ಸಭೆಯನ್ನು ನಡೆಸಲಾಗುತ್ತದೆ. ಕೇಂದ್ರ ಸರ್ಕಾರದ ಪ್ರಧಾನ ಸುತ್ತೋಲೆ ಕಂಡಿಕೆ 4.5 ರಲ್ಲಿ ನೀಡಿರುವ ಮಾರ್ಗಸೂಚಿಯಂತೆ ರಾಜ್ಯದಲ್ಲಿ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರೋಜ್‌ಗಾರ್ ದಿವಸ್ ಆಯೋಜನೆಗೆ ಜಿಲ್ಲೆಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.
ಆ)	ಪ್ರತಿ ತಿಂಗಳು ಗ್ರಾಮ ಪಂಚಾಯಿತಿಗಳಲ್ಲಿ ನಡೆಯಬೇಕಾಗಿರುವ ಸಭೆ ಕಾಲಕಾಲಕ್ಕೆ ನಡೆಯದಿರಲು ಕಾರಣವೇನು;	ಪ್ರತಿ ಮಾಹೆಯಲ್ಲೂ ರೋಜ್‌ಗಾರ್ ದಿವಸ್‌ನ್ನು ಆಯೋಜಿಸಲಾಗುತ್ತಿದ್ದು ರಾಜ್ಯದ 6008 ಗ್ರಾಮ ಪಂಚಾಯಿತಿಗಳಲ್ಲಿ ಪ್ರಸಕ್ತ ಸಾಲಿನ ಆಗಸ್ಟ್ 2021ರ ಮಾಹೆಯ ಅಂತ್ಯಕ್ಕೆ 1995 ರೋಜ್‌ಗಾರ್ ದಿವಸ್‌ನ್ನು ಆಯೋಜಿಸಲಾಗಿದೆ. (<u>ಅನುಬಂಧ-1</u> ರಲ್ಲಿ ಜಿಲ್ಲಾವಾರು ವಿವರ ಲಗತ್ತಿಸಿದೆ.)
ಇ)	ಸದರಿ ಸಭೆಯಲ್ಲಿ ಭಾಗವಹಿಸಲು ಇರುವ ಮಾನದಂಡಗಳೇನು;	ಕನಿಷ್ಠ 25% ನೋಂದಾಯಿತ ಕೂಲಿಕಾರರನ್ನು ಸೇರಿದಂತೆ ಚುನಾಯಿತ ಪಂಚಾಯತ್ ಸದಸ್ಯರು, ಅಕುಶಲ ಕೆಲಸ ಮಾಡಲು ಆಸಕ್ತಿ ಹೊಂದಿದ್ದು, ಉದ್ಯೋಗ ಚೀಟಿಯಿಲ್ಲದವರು, ಯೋಜನೆಯ ಕ್ಷೇತ್ರ ಸಿಬ್ಬಂದಿಗಳು, ಅನುಷ್ಠಾನ ಇಲಾಖೆಗಳು ಮತ್ತು ಬ್ಯಾಂಕ್‌ನ ಪ್ರತಿನಿಧಿಗಳು ಭಾಗವಹಿಸುವರು.

ಈ)	ಈ ಸಭೆಗಳನ್ನು ನಿಯಮಿತವಾಗಿ ನಡೆಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?	ಸಭೆಗಳನ್ನು ನಿಯಮಿತವಾಗಿ ನಡೆಸಲು ಜಿಲ್ಲೆಗಳಿಗೆ ವಾರ್ಷಿಕ ಕ್ರಿಯಾಯೋಜನೆಯನ್ನು ನೀಡಲಾಗಿದೆ. ಪ್ರತಿ ರೋಜ್‌ಗಾರ್ ದಿವಸ್ ಆಚರಿಸಲು ಗ್ರಾಮ ಪಂಚಾಯತಿಗಳಿಗೆ ರೂ.500 ಪ್ರೋತ್ಸಾಹ ಧನ ನೀಡಲಾಗುತ್ತಿದೆ. ರೋಜ್‌ಗಾರ್ ದಿನ ಆಚರಣೆಯನ್ನು ಮೇಲ್ವಿಚಾರಣೆ ನಡೆಸಲು ತಾಲ್ಲೂಕು ಪಂಚಾಯತಿಯ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ರವರಿಗೆ ಜವಾಬ್ದಾರಿ ವಹಿಸಲಾಗಿದೆ.

ಸಂಖ್ಯೆ: ಗ್ರಾಅಪ 61(31) ಉಖಾಯೋ 2021

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು